**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ:**

**ಸೂಚನೆ:-**

ಮೈಸೂರು ನಗರದ ಟಿ.ನರಸಿಪುರ ರಸ್ತೆಯಲ್ಲಿ ಕಂದಾಯ ಇಲಾಖೆಯ ಭವನದ ಕಟ್ಟಡವನ್ನು ನಿರ್ಮಿಸಿ 2-3 ವರ್ಷಗಳು ಕಳೆದರೂ ಸಹ ಇನ್ನು ಆ ಕಟ್ಟಡವನ್ನು ಸಾರ್ವಜನಿಕರ ಸೇವೆಗೆ ಮತ್ತು ಮೈಸೂರಿನ ಆಡಳಿತ ಇಲಾಖೆಗಳ ಕಛೇರಿಗಳಿಗಾಗಿ ಸಮರ್ಪಿಸಲು ಸಾಧ್ಯವಾಗಿರುವುದಿಲ್ಲ. ಸಾರ್ವಜನಿಕರು ಸರ್ಕಾರಕ್ಕೆ ಪಾವತಿಸುವ ಕೋಟ್ಯಾಂತರ ರೂಗಳ ಹಣವನ್ನು ಸುರಿದು ಈ ಕಟ್ಟಡವನ್ನು ಕಟ್ಟಿದರೂ ಪ್ರಯೋಜನಕ್ಕೆ ಬಾರದ ರೀತಿಯಲ್ಲಿ ಆಗಿದೆ. ಈ ಕಟ್ಟಡಕ್ಕೆ ಇನ್ನು ವಿದ್ಯುತ್ತಿನ ಸಂಪರ್ಕವಿಲ್ಲ. ಮೂಲಭೂತ ಸೌಕರ್ಯಗಳಿಲ್ಲ. ಹಾಗೆ ನೋಡಿದರೆ ಮೈಸೂರಿನಲ್ಲಿ ಸಾಕಷ್ಟು ಸರ್ಕಾರಿ ಕಟ್ಟಡಗಳು ಇವೆ ಇವುಗಳನ್ನೇ ಸರ್ಕಾರಿ ಕಛೇರಿಗಳಿಗಾಗಿ ಉಪಯೋಗಿಸಿಕೊಳ್ಳಬಹುದಿತ್ತು. ಇಂತಹದರಲ್ಲಿ ಇಷ್ಟೊಂದು ಹಣವನ್ನು ಖರ್ಚು ಮಾಡಿ ಸರ್ಕಾರಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಸುಖಾ ಸುಮ್ಮನೆ ಸಾರ್ವಜನಿಕರ ಹಣ ಪೋಲಾಗುತ್ತಿದೆ. ಇದೆ ಹಣವನ್ನು ನೀರಾವರಿಗಾಗಿ, ರೈತರ ಅಭ್ಯಧಯಕ್ಕಾಗಿ ಬಳಸಿಕೊಂಡಿದ್ದಲ್ಲಿ ರೈತರಿಗೂ ಅನುಕೂಲವಾಗುತ್ತಿತ್ತು. ಲಕ್ಷಾಂತರ ಜನರಿಗೆ ಉದ್ಯೋಗ ದೊರಕುತ್ತಿತ್ತು. ಜೊತೆಗೆ ಸರ್ಕಾರದ ಜಿ.ಡಿ.ಪಿ.ಯು ಹೆಚ್ಚಾಗುತ್ತಿರುವುದರ ಜೊತೆಗೆ ಸ್ಥಳಾಂತರಿಸಿದ್ದಲ್ಲಿ ಸವಿವಿಸ್ತಾರವಾದ ಈ ಕಟ್ಟಡವು ಖಾಲಿ ಬೀಳುತ್ತದೆ. ಈಗ ಏನು ಮಾಡಲು ಸಾಧ್ಯವಿಲ್ಲ. "ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ" ಎನ್ನುವಂತಾಗಿದೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಕೂಡಲೇ ಆ ಕಂದಾಯ ಭವನದ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಹಾಗೂ ಇನ್ನಿತರೆ ಮೂಲ ಸೌಲಭ್ಯವನ್ನು ಕಲ್ಪಿಸಿ ಉಧ್ಘಾಟನೆ ಮಾಡಿ ಮೈಸೂರಿನ ಸರ್ಕಾರದ ಎಲ್ಲಾ ಜಿಲ್ಲಾ ಮಟ್ಟದ ಕಛೇರಿಗಳು ಒಂದು ಸೂರಿನಡಿ ಇರಲು ವ್ಯವಸ್ಥೆ ಮಾಡಲು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಹಾಗೂ ಮೈಸೂರು ನಜೀರ್‌ಬಾದ್ ನಲ್ಲಿರುವ ಆಡಳಿತ ಸೌಧಕ್ಕೆ (ಮಿನಿ ವಿಧಾನಸೌಧ) ಲಿಫ್ಟ್ ಇಲ್ಲ, ಸರಿಯಾದ ವಿದ್ಯುತ್ ಸಂಪರ್ಕವಿಲ್ಲ, ಈ ಕಟ್ಟಡವು ಸಹ ಮೂಲಭೂತ ಸೌಕರ್ಯಗಳಿಲ್ಲದೆ ಸೊರಗುತ್ತಿದೆ. ಇದನ್ನು ಸಹ ಕೂಡಲೇ ಸರಿಪಡಿಸಿ ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳನ್ನು ಒಂದೇ ಸೂರಿನಡಿ ಈ ಕಟ್ಟಡಕ್ಕೆ ಸ್ಥಳಾಂತರಿಸಬೇಕು ಎಂದು ಮೈಸೂರು ಜಿಲ್ಲೆಯ ಪರವಾಗಿ ನಾನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**ಹೇಳಿಕೆ:-**

ಮೈಸೂರು ನಗರದ ಟಿ.ನರಸಿಪುರ ರಸ್ತೆಯ ಸಿದ್ದಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿಗಳ ಕಛೇರಿಯು ಈಗಾಗಲೇ ಉದ್ಘಾಟಿಸಲಾಗಿದ್ದು, ಈ ಕೆಳಕಂಡ ಕಛೇರಿಗಳು ಕಾರ್ಯನಿರ್ವಹಿಸುತ್ತಿರುತ್ತವೆ.

- ನೆಲಮಹಡಿಯಲ್ಲಿ ಜಿಲ್ಲಾ ಖಜಾನೆ, ಸಹಾಯಕ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶುಪಾಲನ ಕೇಂದ್ರ ಮೈಸೂರು, ಕಛೇರಿಗಳಿಗೆ ಅವಕಾಶ ಕಲ್ಪಿಸಲಾಗಿದೆ.
- ಮೊದಲನೇ ಮಹಡಿಯಲ್ಲಿ ಜಿಲ್ಲಾಧಿಕಾರಿಗಳು ಮೈಸೂರು ಕಛೇರಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಹಾಲಿ ಉಸ್ತುವಾರಿ ಮಂತ್ರಿಗಳ ಕಛೇರಿಯು ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ ಸಂಧರ್ಭದಲ್ಲಿ ಇಡೀ ಕಟ್ಟಡವನ್ನು ಕೋವಿಡ್ ವಾರ್ ರೂಂ ಆಗಿ ಬಳಸಿಕೊಳ್ಳಲಾಗಿರುತ್ತದೆ.
- ಎರಡನೇ ಮಹಡಿಯಲ್ಲಿ
  - ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು
  - ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಮೈಸೂರು
  - ಉಪನಿರ್ದೇಶಕರು ಭೂದಾಖಲೆಗಳ ಇಲಾಖೆ, ಮೈಸೂರು
  - ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು
  - ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಮೈಸೂರು
  - ನ್ಯಾಷನಲ್ ಇನ್ ಪಾರ್ ಮೇಷನ್ ಸೆಂಟರ್ ಕಛೇರಿ, ಮೈಸೂರು
  - ಟಿ.ಆರ್.ಐ.ಎಫ್.ಇ.ಡಿ ಕಛೇರಿ, ಮೈಸೂರು
  - ಸ್ವಾಮಿತ್ವ ರೀಸರ್ವೆ ಮತ್ತು ಯು.ಪಿ.ಓ.ಆರ್ ಯೋಜನ ಕಛೇರಿ, ಮೈಸೂರು ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

ಹಾಲಿ ಜಿಲ್ಲಾ ಖಜಾನೆಯನ್ನು ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಹೊಸ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಪ್ರತಿ ಮಾಹೆ ವಿದ್ಯುತ್ ಬಿಲ್ ಪಾವತಿಸಲಾಗುತ್ತಿದೆ. ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಜಿಲ್ಲಾಧಿಕಾರಿಯವರ ಕಛೇರಿಯು ಹಳೆಯ ಕಟ್ಟಡದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು, ಸದ್ಯದಲ್ಲಿಯೇ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುವುದು.

ಮುಂದುವರೆದು, ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ನಜೀರ್‌ಬಾದ್‌ನಲ್ಲಿರುವ ತಾಲ್ಲೂಕು ಆಡಳಿತ ಸೌಧಕ್ಕೆ ಲಿಫ್ಟ್ ವ್ಯವಸ್ಥೆಯಿದ್ದು, ಕೆಲವು ತಿಂಗಳುಗಳಿಂದ ದುರಸ್ಥಿಯಲ್ಲಿದ್ದು, ದಿನಾಂಕ:15.12.2022ರಂದು ಲಿಫ್ಟನ್ನು ದುರಸ್ಥಿಗೊಳಿಸಲಾಗಿರುತ್ತದೆ. ಪ್ರಸ್ತುತ ಲಿಫ್ಟ್ ಚಾಲ್ತಿಯಲ್ಲಿರುತ್ತದೆ. ಈ ಕಟ್ಟಡಕ್ಕೆ ಈಗಾಗಲೇ ವಿದ್ಯುತ್ ಸೌಲಭ್ಯವಿರುತ್ತದೆ ಹಾಗೂ ಸದರಿ ಕಟ್ಟಡದಲ್ಲಿ ಮೂಲಭೂತ ಸೌಕರ್ಯಗಳು ಇರುತ್ತವೆ. ತಾಲ್ಲೂಕು ಆಡಳಿತ ಸೌಧದಲ್ಲಿ ಈಗಾಗಲೇ ಲಭ್ಯವಿರುವ ಸ್ಥಳಾವಕಾಶದಲ್ಲಿ ತಾಲ್ಲೂಕು ಕಛೇರಿ, ತಾಲ್ಲೂಕು ಪಂಚಾಯಿತಿ, ಸಬ್ ರಿಜಿಸ್ಟ್ರಾರ್ ಕಛೇರಿ, ಸಾಂಖ್ಯಿಕ ಇಲಾಖೆ, ಎಸ್.ಬಿ.ಎಂ ಬ್ಯಾಂಕ್, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

ಹೊಸ ಜಿಲ್ಲಾಧಿಕಾರಿಗಳ ಕಛೇರಿಯ ಕಟ್ಟಡದಲ್ಲಿ ವಿವಿಧ ಕಛೇರಿಗಳ ದೈನಂದಿನ ಸರ್ಕಾರಿ ಕೆಲಸಗಳು ಸುಗಮವಾಗಿ ನಡೆಯುತ್ತಿವೆ.

**ಸಂಖ್ಯೆ: ಆರ್‌ಡಿ 136 ಡಬ್ಲ್ಯೂಬಿಆರ್ 2022**

**(ಆರ್. ಅಶೋಕ)**
ಕಂದಾಯ ಸಚಿವರು.

67 C